International Journal of Kannada Research
www.kannadajournal.com

**ISSN: 2454–5813**
IJSR 2015; 1(2): 12-13
© 2015 IJKS
www.kannadajournal.com
Received: 03-07-2015
Accepted: 04-08-2015

**Dr. Kavyashree G**
Assistant Professor,
Govt. First Grade College,
Davanagere-577004,
Karnataka, India.

**Correspondence**
**Dr. Kavyashree G**
Assistant Professor,
Govt. First Grade College,
Davanagere-577004,
Karnataka, India.

# ವಚನ ಚಳುವಳಿಯಲ್ಲಿ ಪುಣ್ಯಸ್ತ್ರೀ ಎಂಬ ವಿಶಿಷ್ಟ ಪರಿಕಲ್ಪನೆ: ಒಂದು ಕಿರುನೋಟ

**Kavyashree G**

೧೨ನೆಯ ಶತಮಾನದ ಯುಗವೆಂದರೆ ಅದೊಂದು ಫಲ ತುಂಬಿದ ಮರವಿದ್ದಂತೆ. ನಾನಾ ವರ್ಗ, ವರ್ಣ, ಜಾತಿ, ಪ್ರದೇಶ, ಕಾಯಕಗಳಿಂದ ಅನೇಕ ಶರಣರು ಬಂದು ಸೇರಿ ಜಾತಿ, ಲಿಂಗ, ವರ್ಗ, ಬಡವ, ಬಲ್ಲಿದ ಭೇದಗಳನ್ನು ಅಳಿಸಿ ಹಾಕಿ ಸಮಾನತೆಯ ಹಂದರದ ಮೇಲೆ ಸಮಾಜವನ್ನು ಕಟ್ಟಲು ಅಣಿಯಾದರು. ಜನಸಾಮಾನ್ಯರನ್ನು ಮುಖ್ಯವಾಗಿ ಕೇಂದ್ರವಾಗಿಟ್ಟುಕೊಂಡು ಅವರಿಗೆ ನ್ಯಾಯಯುತವಾಗಿ ಸಿಗಬೇಕಾದ ಅನುಕೂಲತೆಗಳು, ಅವಕಾಶಗಳನ್ನು ಕಲ್ಪಿಸಲು ಮುಂದಾದರು. ಇಂಥ ಶರಣಯುಗ ಎಂಬ ಮಹಾಬೆಳಕಿನಲ್ಲಿ ನೂರಾರು ಮಹಿಳೆಯರು–ಅದರಲ್ಲಿಯೂ ಕೆಳವರ್ಗದವರು, ಅನಕ್ಷರಸ್ತರು ತಮ್ಮ ಆಲೋಚನೆಗಳನ್ನು ವಚನಗಳ ರೂಪ–ಶೈಲಿಯಲ್ಲಿ ಅಭಿವ್ಯಕ್ತಪಡಿಸಿದ್ದು ವಿಶೇಷ. ಸಮಾಜಕ್ಕೆ ಮಾರ್ಗದರ್ಶನ ಮಾಡಿದ್ದು, ಎಚ್ಚರಿಸಿದ್ದದ್ದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಶಿವಶರಣರು ಹೆಣ್ಣನ್ನು ಗೌರವಿಸಿ ಸಮಾನ ಅವಕಾಶ ಮಾಡಿಕೊಟ್ಟಿದ್ದು, “ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿ ಅಲ್ಲ, ಹೆಣ್ಣು ಸಾಕ್ಷಾತ್ ಕಪಿಲ ಸಿದ್ಧ ಮಲ್ಲಿಕಾರ್ಜುನ ನೋಡಾ” ಎಂದು ಹೆಣ್ಣನ್ನು ಶ್ರೇಷ್ಟತೆಯೆಡೆಗೆ ಕೊಂಡೊಯ್ದರು. “ಗಂಡನ ಕೂಡ ಸಮಾಧಿಕೊಂಬ ಹೆಂಡಿರು ಅನಂತ, ಹೆಂಡಿರ ಕೂಡ ಸಮಾಧಿಯ ಕೊಂಬ ಗಂಡರುಂಟೆ ಲೋಕದೊಳ್?” ಎಂದು ಪ್ರಶ್ನಿಸಿದ್ದುಂಟು. ಇಂಥ ಸಮಾಜದಲ್ಲಿ ಮಹಿಳೆಗೆ ಶಿವಶರಣರು ನೀಡಿದ ಆದರ ಗೌರವಗಳು ಯಾವುದೇ ಕಾಲದಲ್ಲಿ ಯಾರೂ ನೀಡಿಲ್ಲವೆಂದೆ ಹೇಳಬಹುದು. ಮಹಿಳೆಯ ಅಂತಃಶಕ್ತಿ, ವೈಚಾರಿಕ ಸಾಮರ್ಥ್ಯವನ್ನು ಗ್ರಹಿಸಿ ಅವಳನ್ನು ಎಚ್ಚರಿಸಿದ ಶರಣರು ಅನುಭವ ಮಂಟಪದ ವೇದಿಕೆಯಲ್ಲಿ ಶೂನ್ಯ ಸಂಪಾದನೆಯ ಮಹಿಳಾ ಸಂವಾದ ಚರ್ಚೆಯ ಸನ್ನಿವೇಶಗಳನ್ನು ನೋಡಿದರೆ ಶರಣರ ದೃಷ್ಟಿಭಾವ, ವೈಶಾಲ್ಯ, ಗೌರವಿಸಿದ ರೀತಿ ನೀತಿ ಬಗ್ಗೆ ಸ್ಪಷ್ಟವಾಗುತ್ತದೆ. ಕೆಳವರ್ಗದ ಸ್ತ್ರೀಯರು ಶರಣ ಪಥದಲ್ಲಿ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಂಡು, ಏಕದೇವೋಪಾಸನೆ, ವ್ರತನಿಷ್ಠೆ, ದಾಸೋಹ, ಕಾಯಕ, ನಡೆ ನುಡಿ ಒಂದಾದ ಪರಿ, ಈ ಮುಂತಾದವುಗಳನ್ನಿಟ್ಟುಕೊಂಡು ವಚನಗಳನ್ನು ಹೇಳಿದ್ದು ಅದ್ಬುತವೆನಿಸುತ್ತದೆ. ವಚನಕ್ರಾಂತಿಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದ ಮಹಿಳೆಯರ ಸಂಖ್ಯೆ ಅಪಾರವಾಗಿದೆ. ಕೆಲವರ ವಚನಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭಿಸಿದರೆ, ಇನ್ನೂ ಕೆಲವರದು ಕೇವಲ ಒಂದೇ ಒಂದು ವಚನ ಲಭ್ಯವಾಗಿದೆ.
ವಚನಕಾರ್ತಿಯರನ್ನು ಅಧ್ಯಯನ ಮಾಡುವಾಗ ಕೆಲ ಶರಣೆಯರ ಹೆಸರಿನ ಹಿಂದೆ ‘ಪುಣ್ಯಸ್ತ್ರೀ’ ಎಂದು ತುಂಬಾ ಗೌರವ ಅಭಿಮಾನದ ದ್ಯೋತಕವಾಗಿ ಸಂಬೋಧನೆ ಮಾಡಿದ್ದು ಕಂಡು ಬರುತ್ತದೆ. ಇಂಥ ಪುಣ್ಯಸ್ತ್ರೀಯರು ಮುಖ್ಯವಾಗಿ ಕೆಳವರ್ಗ ಮತ್ತು ಕಾಯಕ ಜೀವಿ ಶರಣರ ಪತ್ನಿಯರು. ಶರಣರ ಹೆಸರಿನೊಂದಿಗೆ ಪುಣ್ಯಸ್ತ್ರೀ ಎಂಬ ವಿಶೇಷಣ ಬಳಸಿ ನಂತರ ಶರಣೆಯ ಹೆಸರನ್ನು ಬಳಸಲಾಗಿದೆ. ಇಂಥ ಪುಣ್ಯಸ್ತ್ರೀಯರಲ್ಲಿ ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ, ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ, ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ (ಹೆಸರು ಲಭ್ಯವಿಲ್ಲ), ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ, ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ, ಹಾದರಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ, ಎಡಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ, ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ, ಗುಂಡಯ್ಯಗಳ ಪುಣ್ಯಸ್ತ್ರೀ ಕೇತವ್ವೆ (ಕೇತಲದೇವಿ), ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ, ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ, ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ಹೀಗೆ ಮೊದಲಾದವರು. ಕೆಳವರ್ಗದ ಮತ್ತು ಕೆಳಜಾತಿಯ ವಚನಕಾರ್ತಿಯರು ವೀರಶೈವ ತತ್ವಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು ಅದರಂತೆ ಬಾಳಿ ಬದುಕಿದ’ರು. ಶರಣ ಬಸವಣ್ಣ ಇವರಿಗೆ ಮಾರ್ಗದರ್ಶಕನಾಗಿ ಇವನ ಪ್ರಭಾವಕ್ಕೆ ಒಳಗಾದ ಶರಣೆಯರು ತನ್ನರಿವೆ ತನಗೆ ಗುರು ಎಂಬ ಬಸವನ ಮೂಲಮಂತ್ರವನ್ನು ಜೀವಂತವಾಗಿಟ್ಟರು. ಅದಕ್ಕಾಗಿಯೇ ಅಮುಗೆ ರಾಯಮ್ಮ:–

ನಾನೆ ಗುರುವಾದ ಬಳಿಕ ಗುರುವೆಂಬುದಿಲ್ಲ
ನಾನೆ ಲಿಂಗವಾದ ಬಳಿಕ ಲಿಂಗವೆಂಬುದಿಲ್ಲ
ನಾನೆ ಪ್ರಸಾದವಾದ ಬಳಿಕ ಪ್ರಸಾದವೆಂಬುದಿಲ್ಲ
ಅಮುಗೇಶ್ವರನೆಂಬ ಲಿಂಗವು ತಾನೆಯಾದ ಬಳಿಕ
ಲಿಂಗವನರಿದೆನೆಂಬ ಹಂಗಿನವನಲ್ಲ

ಇದಕ್ಕೆ ಪರ್ಯಾಯವಾಗಿ ದೇವರು, ಧರ್ಮ, ಲಿಂಗ, ಜಂಗಮ, ಗುರುವಿನ ಹೆಸರಿನಲ್ಲಿ ನಡೆದಿರಬಹುದಾದ ಶೋಷಣೆಯಿಂದ ಹೆಣ್ಣುಮಕ್ಕಳು ಬಿಡಿಸಿಕೊಂಡು, ಸಾಮಾನ್ಯರು ಶೋಷಣೆಗೆ ಒಳಗಾಗಬಾರದೆಂಬ ಎಚ್ಚರಿಕೆಯ ಮಾತುಗಳನ್ನು ಈ ರೀತಿ ಹೇಳಿರಬಹುದು[೧] ಶರಣ ಗುಂಪಿಗೆ ಸೇರಿರುವ ಅನೇಕರನ್ನು ಹುರಿದುಂಬಿಸಿ, ಆತ್ಮಬಲವನ್ನು ತುಂಬಿ ಕೀಳರಿಮೆಯನ್ನು ಹೋಗಲಾಡಿಸಲಾಯಿತು. ದೇವರು, ಧರ್ಮಗಳ ಹೆಸರಿನಲ್ಲಿ ಸ್ತ್ರೀಯರ ಮೇಲೆ ಉಂಟಾಗುತ್ತಿದ್ದ ಶೋಷಣೆ, ಅನ್ಯಾಯ, ಮೌಢ್ಯತೆಯ ವಿರುದ್ಧ ಪ್ರತಿಭಟಿಸಲಾಯಿತು. ಈಗಾಗಲೇ ಅನ್ಯಾಯಕ್ಕೊಳಗಾದ ದೇಹ ಮತ್ತು ಮನಸ್ಸುಗಳ ಸ್ಥಿತಿಗೆ ಕಾಯಕದ ಪರಿಧಿಯಲ್ಲಿ ವಿಶಾಲತೆಯನ್ನು ಕಲ್ಪಿಸಿಕೊಟ್ಟು ಉದ್ಧರಿಸಿದ ಶ್ರೇಯ ಶಿವಶರಣರಿಗೆ ಸಂದಿದೆ. ಈ ದಿಸೆಯಲ್ಲಿ ಶೋಷಿತಗೊಂಡ ಹೆಣ್ಣಿನ ದೇಹ ಮತ್ತು ಆತ್ಮಕ್ಕೆ ಮರುಜನ್ಮ ನೀಡಿದವರು ಶಿವಶರಣರು. ಯಾವುದನ್ನು ಸಮಾಜ ಸೂಳೆಗಾರಿಕೆ, ವೇಶ್ಯಾವಾಟಿಕೆ, ದೇವದಾಸಿ ಎಂಬ ಕ್ರೂರಪದ್ಧತಿಗೆ ಹೆಣ್ಣುಗಳನ್ನು ಬಲಿಪಶು ಮಾಡಲಾಗುತ್ತಿತ್ತೋ ಅಂಥ ಸ್ತ್ರೀ ಸಮುದಾಯಕ್ಕೆ ಮರುಹುಟ್ಟನ್ನು ಕೊಟ್ಟು ಅವರನ್ನು ಉದ್ಧರಿಸಲಾಯಿತು. ಸಮಾಜದ ಕೆಟ್ಟ ವ್ಯವಸ್ಥೆಗೆ ಬಲಿಯಾದ ಇಂಥ ಹೆಣ್ಣುಗಳನ್ನು ಸಾಮಾಜಿಕ ಜೀವನದ ಹೆದ್ದೊರೆಯಲ್ಲಿ ಸೇರಿಕೊಳ್ಳುವ, ಒಂದಾಗುವ ಆತ್ಮಸ್ಥೈರ್ಯವನ್ನು ಕಾಯಕದ ಪರಿಭಾಷೆಯಲ್ಲಿ ತುಂಬಿಕೊಟ್ಟವರು ಶಿವಶರಣರು. ಪುರುಷ ಸಮಾಜದ ದಬ್ಬಾಳಿಕೆಗೆ ಒಳಗಾದ ಸ್ತ್ರೀಯರನ್ನು ಮುಕ್ತಿ ಮಾಡಿದವರೆಂದರೆ ಪುರುಷರಾದ ಶಿವಶರಣರು. ಅಂಥ ಸ್ತ್ರೀಯರನ್ನು ಪುಣ್ಯಸ್ತ್ರೀ ಎಂದು ಹೆಸರಿಸಿ ಗೌರವ, ಸ್ವಾಭಿಮಾನ ತಂದು ಕೊಟ್ಟವರೇ ಈ ಉದ್ಧಾರಕರಾದ ಶರಣರು.[೨] ಇದು ಅಸಾಮಾನ್ಯವಾದ ಕೆಲಸ. ತನ್ನದೆಲ್ಲವನ್ನು ಕಳೆದುಕೊಂಡು ಹತಾಶರಾದವರಿಗೆ ಮರುಜೀವವನ್ನು ತುಂಬಿ ಸಮಾಜಕ್ಕೆ ಮುಖಾಮುಖಿಯಾಗಿ ನಿಲ್ಲಲು ಅವಕಾಶ ಮಾಡಿಕೊಟ್ಟರು. ಈ ಸದವಕಾಶವನ್ನು ಮತ್ತು ತನ್ನೆಲ್ಲ ಸ್ವಾತಂತ್ರ್ಯವನ್ನು ಬಹಳ ಅರ್ಥವತ್ತಾಗಿ ಬಳಸಿಕೊಂಡು, ಬದುಕಿಗೆ ಹೊಸ ವ್ಯಾಖ್ಯಾನ ಬರೆದವರೇ ಪುಣ್ಯಸ್ತ್ರೀಯರು.

ಶಿವಶರಣರ ಪುಣ್ಯಸ್ತ್ರೀಯರು ಸತಿಪತಿಗಳೊಂದಾದ ಭಕ್ತಿಭಾವದಲ್ಲಿ ಹಿತವನ್ನು ಕಾಣುವ ಸಮಾನಶೀಲವಾದ ನಡತೆಯಲ್ಲಿ ಗೌರವಿಸಲ್ಪಟ್ಟವಳು. ವೈಚಾರಿಕ ಸತಿಯಾಗಿ, ದಾಂಪತ್ಯ ಜೀವನ ಸತ್ಯ ಶುದ್ಧವಾಗಿರಬೇಕು. ಗಂಡ ಹೆಂಡತಿ ಅಂತರಂಗ ಬಹಿರಂಗದಲ್ಲಿ ಒಂದೇ ಆಗಿ ಅವರು ಆಚಾರ ವಿಚಾರಗಳಲ್ಲಿ ತಾದ್ಯಾತ್ಮ ಹೊಂದಿ ಪರಸ್ಪರ ಪ್ರಶ್ನಿಸುವ, ತಿದ್ದುವ ತೀಡುವ, ಒಬ್ಬರ ಸಂಶಯಗಳನ್ನು ಇನ್ನೊಬ್ಬರು ಪರಿಹರಿಸುವ ಹೀಗೆ ಎಲ್ಲ ದೃಷ್ಟಿಯಿಂದಲೂ ಗುಣಶೀಲತೆಯಿಂದ ಕೂಡಿ “ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ?” ಎಂಬ ಸಮತಾಭಾವನೆಯ ಬದುಕು ಇವರದಾಯಿತು.

ಪುಣ್ಯಸ್ತ್ರೀಯರು ಹೆಚ್ಚಾಗಿ ವ್ರತಾಚಾರದ ನಿಷ್ಠೆಯ ಕುರಿತೆ ಮಾತನಾಡಿದರು ಮತ್ತು ಅದನ್ನೇ ತಮ್ಮ ಜೀವನದುದ್ದಕ್ಕೂ ಪಾಲಿಸಿದರು. ಆಚಾರ ಪ್ರಧಾನವಾದ ಶರಣ ಧರ್ಮದಲ್ಲಿ ನೇಮ ಶೀಲ ಚಾರಿತ್ರ್ಯ ಎಂಬುದು ಮಾತಿನ ಸೂತಕವಾಗದೆ ನೈತಿಕ ಜವಾಬ್ದಾರಿಯಾಗಿತ್ತು. ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿಯ ವೈಚಾರಿಕತೆ ಈ ಕೆಳಗಿನ ವಚನದಲ್ಲಿ ಕಾಣಬಹುದು.

ಹದ ಮಣ್ಣಲ್ಲದೆ ಮಡಕೆಯಾಗಲಾರದು
ವ್ರತಹೀನನ ಬೆರೆಯಲಾಗದು
ಬೆರೆದಡೆ ನರಕ ತಪ್ಪದು
ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರಾ[೩]

ಒಟ್ಟಾರೆ ಶರಣರು ಪುಣ್ಯಸ್ತ್ರೀಯರಿಗೆ ಕೊಟ್ಟ ಗೌರವ ಮರ್ಯಾದೆಗಳ ಪರಿಣಾಮವಾಗಿ ಅವರಿಂದ ವಿನೂತನವಾದ ಕೊಡುಗೆ ವೀರಶೈವ ಧರ್ಮಕ್ಕೆ ಲಭಿಸಿತು.[೪] ಪುಣ್ಯಸ್ತ್ರೀಯರ ಕಾಯಕ ಪರಿಕಲ್ಪನೆ, ವ್ರತನಿಷ್ಠೆ, ಏಕದೇವೋಪಾಸನೆ, ಸತ್ಯನಿಷ್ಠೆ, ಆತ್ಮಸ್ಥೈರ್ಯ, ಗುರು ಲಿಂಗ ಜಂಗಮ ಈ ಮೊದಲಾದವುಗಳು ಮೆಚ್ಚುವಂಥವುಗಳಾಗಿವೆ. ಪ್ರಸ್ತುತ ಕಾಲಕ್ಕಂತೂ ಇವರ ಬದುಕು ಮತ್ತು ವಚನಗಳು ದಾರಿದೀಪಗಳಾಗಿವೆ. ಸೋತು ನೊಂದು ಹೋದ ಬದುಕನ್ನು ಪುನಃ ಕಟ್ಟಿಕೊಳ್ಳಲು ಇವು ಪ್ರೇರೇಪಿಸುತ್ತವೆ. ಜೀವನ ಪ್ರೀತಿಯನ್ನು ಕಲಿಸಿಕೊಡುತ್ತವೆ.

**ಅನುಬಂಧ**

**ಪುಣ್ಯಸ್ತ್ರೀಯರು**

ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ
ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ
ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ (ಹೆಸರು ಲಭ್ಯವಿಲ್ಲ)
ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ
ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ
ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ
ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ
ಹಾದರಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ
ಎಡಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ
ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ
ಗುಂಡಯ್ಯಗಳ ಪುಣ್ಯಸ್ತ್ರೀ ಕೇತವ್ವೆ (ಕೇತಲದೇವಿ)
ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ
ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ
ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

**ಕೊನೆಟಿಪ್ಪಣಿಗಳು**

೧. ಡಾ.ಮಲ್ಲಿಕಾ ಘಂಟಿ, ತನುಕರಗದವರಲ್ಲಿ, ಗೌತಮ ಪ್ರಕಾಶನ, ಬಳ್ಳಾರಿ, ೨೦೦೦, ಪು. ೪೧
೨. ಸಿದ್ಧರಾಮಯ್ಯ ಎಸ್.ಜಿ., ನಿಶ್ಯಬ್ಧದ ಜಾಡು, ಸುಮುಖ ಪ್ರಕಾಶನ, ಬೆಂಗಳೂರು, ೨೦೦೫, ೨೨೭–೨೮
೩. ಡಾ. ವೀರಣ್ಣ ರಾಜೂರ., ಶಿವಶರಣೆಯರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩, ಪು.೪೮–೪೯
೪. ಕಾವ್ಯಶ್ರೀ ಜಿ., ಹಡಪದ ಲಿಂಗಮ್ಮನ ವಚನಗಳು ಒಂದು ಅಧ್ಯಯನ, ಜ್ಯೋತಿ ಪ್ರಕಾಶನ, ಮೈಸೂರು, ೨೦೧೩, ಪು. ೧೫೫–೫೩